**ಪಾಠ–12** **ಸೆಪ್ಟೆಂಬರ್ 14–20**

# ಕರುಣೆಯನ್ನು ಪ್ರೀತಿಸುವುದು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಮತ್ತಾಯ 6:25–33, ಯಾಕೋಬ 1:5–8, 2:15,16, ಯೆಶಾಯ 52:7 ಮತ್ತು 1 ಯೋಹಾನ 3:16–18, ಯೆಶಾಯ 58:1–10.

**ಸ್ಮರಣವಾಕ್ಯ : ಯಥಾರ್ಥರಿಗೆ ಕತ್ತಲೆಯಲ್ಲೂ ಜ್ಯೋತಿ ಮೂಡುವುದು, ದಯೆಯೂ ಕನಿಕರವೂ ನೀತಿಯೂ ಉಳ್ಳ ದೇವರೇ ಆ ಜ್ಯೋತಿ. ದಯಾಳುವಾಗಿ ಧನಸಹಾಯ ಮಾಡುವವನೂ ತನ್ನ ಕಾರ್ಯವನ್ನು ನೀತಿಯಿಂದ ನಡಿಸುವವನೂ ಭಾಗ್ಯವಂತನು (ಕೀರ್ತ 112:4,5).**

ನಾವು ನೋಡಿದಂತೆ ದೇವರು ಬಡವರ ಮೇಲೂ, ಶೋಷಿತರ ಮೇಲೂ ಕಾಳಜಿಯುಳ್ಳವನಾಗಿ ಅವರ ಪರವಾಗಿ ಕಾರ್ಯಮಾಡುವ ಆಸಕ್ತಿದಾಯಕ ವರ್ಣನೆಗಳು ಸತ್ಯವೇದದಲ್ಲಿ ತುಂಬಿವೆ. ಸತ್ಯವೇದದಲ್ಲಿರುವ ಆದೇಶಗಳು ಕೇವಲ ವಿರಳವಾಗಿ ಅಲ್ಲಲ್ಲಿ ನಡೆಯುತ್ತವೆ ಮತ್ತು ಈವಾಗ ಭಾಗಶಃ ನೆರವೇರಿವೆ. ಕ್ರಿಸ್ತನು ಬಂದಾಗ ಪೂರ್ಣವಾಗಿ ನೆರವೇರುತ್ತವೆ. ನಂತರ ಅದ್ಭುತವಾದ ಘಟನೆಗಳು ಜರುಗುತ್ತವೆ.

ಅಲ್ಲಿಯವರೆಗೆ ಕೆಟ್ಟತನ (ದುಷ್ಟತ್ವ) ಅನೇಕ ವಿಧಗಳಲ್ಲಿ ಮುಂದುವರೆದುಕೊಂಡು ಹೋಗುತ್ತದೆ. ಸೈತಾನನ ದೂತರುಗಳು, ಅಂಧಕಾರಶಕ್ತಿಗಳ ಪ್ರಭಾವದಿಂದ ಚಿತಾವಣಿ ಹೊಂದುತ್ತವೆ. ಈ ಕೆಟ್ಟತನವು ಅನೇಕ ವೇಳೆ ಬಡತನ, ಹಿಂಸೆ, ದಬ್ಬಾಳಿಕೆ, ದಾಸತ್ವ, ಶೋಷಣೆ ಮತ್ತು ದುರಾಶೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಅಂತಹ ಲೋಕದಲ್ಲಿ ನಮ್ಮ ಸಮುದಾಯಗಳು, ಸಭೆಗಳು, ಮನೆಗಳು, ಅನೇಕ ಸಂದರ್ಭಗಳಲ್ಲಿ ಈ ಕೆಟ್ಟತನದ ವಿರುದ್ಧವಾಗಿ ಅದೆಷ್ಟೇ ಕಠಿಣವಾದರೂ ನಿಲ್ಲಬೇಕು.

ನಾವು ದೇವರ ಪ್ರೀತಿ ಮತ್ತು ಆಜ್ಞೆಗಳಿಗೆ ಪ್ರತಿಕ್ರಿಯೆ ತೋರುತ್ತಾ ಯೇಸುಕ್ರಿಸ್ತನ ತ್ಯಾಗ ಮತ್ತು ಸೇವೆಯ ಬೆಳಕಿನಲ್ಲಿ ಜೀವಿಸುತ್ತಾ ಪವಿತ್ರಾತ್ಮನ ಇರುವಿಕೆಯಿಂದ ಬಲಗೊಂಡು ಮಾರ್ಗದರ್ಶನ ಪಡೆಯಬೇಕು. ನಾವು ಕರುಣೆ, ಸೃಜನಶೀಲತೆ, ಧೈರ್ಯ ಇವುಗಳಿಂದ ತುಂಬಿದವರಾಗಿ ನಡೆದುಕೊಳ್ಳಬೇಕು.

ನ್ಯಾಯವನ್ನು ಆಚರಿಸುವುದು, ಕರುಣೆಯಲ್ಲಿ ಆಸಕ್ತನಾಗಿರುವುದು, ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವುದು ಇಷ್ಟನ್ನೇ ಹೊರತು ಯೆಹೋವನು ನಿನ್ನಿಂದ ಇನ್ನೇನು ಅಪೇಕ್ಷಿಸುವನು? (ಮೀಕ 6:8). ಈ ವಾರದ ಪಾಠವನ್ನು ಸೆಪ್ಟೆಂಬರ್ 21 ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಸೆಪ್ಟೆಂಬರ್ 15**

## ದೇವರ ರಾಜ್ಯದ ಆದ್ಯತೆಗಳು

ಕ್ರಿಸ್ತನ ಬೋಧನೆಗಳಿಂದಲೂ ಮತ್ತು ಹೊಸ ಒಡಂಬಡಿಕೆಯ ಬರಹಗಾರರಿಂದಲೂ ನಮಗೆ ಸ್ಪಷ್ಟವಾಗಿರುವಂತೆ ಯಾರು ದೇವರ ರಾಜ್ಯದ ಸದಸ್ಯರುಗಳಾಗಿ ಬಾಳುವುದಕ್ಕೆ ಆಯ್ಕೆ ಮಾಡಿಕೊಳ್ಳುವರೋ ಅವರು ಲೋಕಕ್ಕಿಂತ ಭಿನ್ನವಾದ ಮೌಲ್ಯಗಳನ್ನು, ಆದ್ಯತೆಗಳನ್ನು ಇಟ್ಟುಕೊಂಡು ಜೀವಿಸುತ್ತಾರೆ.

ಮತ್ತಾಯ 6:25–33ನ್ನು ಓದಿರಿ. ಈ ವಾಕ್ಯಗಳಲ್ಲಿ ನಮಗೆ ಯಾವ ಭರವಸೆಯನ್ನು ಕೊಡಲಾಗಿದೆ ಮತ್ತು ಈ ಭರವಸೆಯು ನಮ್ಮ ಆದ್ಯತೆಗಳ ಮೇಲೆ ಯಾವ ಪ್ರಭಾವವನ್ನು ಬೀರುತ್ತದೆ?

ಆಹಾರಕ್ಕಿಂತ ಪ್ರಾಣವೂ, ಉಡುಪಿಗಿಂತ ಜೀವವು ಮುಖ್ಯವಾದುದೆಂದು ಯೇಸುವು ಬೋಧಿಸುತ್ತಾನೆ (ಮತ್ತಾಯ 6:25). ಇವುಗಳೆಲ್ಲ ನಮಗೆ ಅಗತ್ಯವಾಗಿವೆ ನಿಜ, ಆದರೆ ದೇವರ ರಾಜ್ಯದ ಹಿನ್ನೆಲೆಯಲ್ಲಿ ಇವುಗಳನ್ನು ನೋಡಬೇಕು, ಹಾಗೆಂದರೆ ನಾವು ನಮ್ಮ ಜೀವಿತಗಳನ್ನು ವಾಸ್ತವವಾದ ಮತ್ತು ವ್ಯವಹಾರ್ಯಕ ವಿಧಾನಗಳಲ್ಲಿ ಮತ್ತೆ ಆದ್ಯತೆಕರಿಸಬೇಕು. ಇತರರನ್ನು ಮೇಲೆತ್ತುವ ಮತ್ತು ಪರಾಂಬರಿಕೆಯ ಕರೆಯು ಸತ್ಯವೇದದಾದ್ಯಂತವಿದೆ. ಈ ಕರೆಯನ್ನು ನಾವು ಗುರುತಿಸಬೇಕು. ಈ ಕರೆಯು ಸಹಾ ನಮ್ಮ ಆದ್ಯತೆಗಳಲ್ಲಿ ಒಂದಾಗಿರುತ್ತದೆ. ನಾವು ನಮ್ಮ ಮೇಲೆ ಮಾತ್ರವೇ ಕಾಳಜಿಯುಳ್ಳವರಾಗದೆ ಇತರರ ಮೇಲೆ

ಹೆಚ್ಚಿನ ಕಾಳಜಿಯುಳ್ಳವರಾಗಬೇಕೆಂದು ನಮ್ಮನ್ನು ಪ್ರೇರಿಸುತ್ತದೆ. ನಮ್ಮ ಮೇಲೆ ಅಧಿಕಾರ ಹೊಂದಿ ನಮ್ಮ ಮೇಲೆ ದಬ್ಬಾಳಿಕೆ ನಡೆಸುವವರೊಂದಿಗಿನ ಸಂಬಂಧಗಳನ್ನು ಸಹಾ ಈ ಆದ್ಯತೆಗಳು ಬದಲು ಮಾಡುತ್ತವೆ. ಕ್ರೈಸ್ತರು ಸಾಧ್ಯವಾದಷ್ಟು ಸರ್ಕಾರದ ಅಧಿಕಾರಕ್ಕೆ ವಿಧೇಯರಾಗಿ ಗೌರವಿಸಬೇಕು ಎಂದು ಸತ್ಯವೇದವು ಬೋಧಿಸುವಾಗ (ರೋಮ 13:1–7). ನಾವು ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲಾ (ಅ.ಕೃ 5:29) ಎಂಬ ಪೇತ್ರನ ಹೇಳಿಕೆಯನ್ನು ನೋಡುತ್ತೇವೆ. ಯೇಸುವು ತನ್ನನ್ನು ತಪ್ಪಿನಲ್ಲಿ ಸಿಕ್ಕಿಸಲು ಪ್ರಯತ್ನ ಪಡುವವರು ಈ ಪ್ರಶ್ನೆಯನ್ನು ಕೇಳಿದಾಗ ಅವರಿಗೆ ಈ ಎರಡೂ ತತ್ವಗಳನ್ನು ಸಮತೋಲನದಲ್ಲಿಡುವ ಉತ್ತರವನ್ನು ನೀಡುತ್ತಾನೆ (ಮತ್ತಾಯ 22:21). ಹಾಗಾದರೆ ಕೈಸರನದ್ದನ್ನು ಕೈಸರನಿಗೆ ಕೊಡಿರಿ; ದೇವರದ್ದನ್ನು ದೇವರಿಗೆ ಕೊದಿರಿ ಎಂದು ಹೇಳಿದನು".

ಸರ್ಕಾರದಲ್ಲಿಯಾಗಲಿ ಅಥವಾ ಬೇರೆ ಅಧಿಕಾರ ಹೊಂದಿದವರು ಯಾವಾಗಲೂ ಹೆದರಿಸಿ ಗದರಿಸಿ ಬಲವಂತದಿಂದ ಜನರನ್ನು ಆಳುತ್ತಾರೆ. ಕ್ರಿಸ್ತನ ಜೀವಿತದಲ್ಲಿ ನಾವು ನೋಡಿದಂತೆ ನಂಬಿಗಸ್ತಿಕೆಯ ಜೀವನವೆಂದರೆ ಯಾವಾಗಲೂ ಎಲ್ಲಾ ಸನ್ನಿವೇಶದಲ್ಲೂ ಕೆಟ್ಟತನದ ವಿರುದ್ಧ ಏನೂ ಮಾಡದೆ ನಿಷ್ಕ್ರಿಯರಾಗಿರಬೇಕೆಂತಲ್ಲ. ಉದಾಹರಣೆಗೆ ಅಮೇರಿಕ ದೇಶದ ಗುಲಾಮ ಪದ್ಧತಿಯನ್ನು ಕುರಿತು ಎಲೆನ್ ಜಿ ವೈಟಮ್ಮನವರು ಹೀಗೆ ಬರೆದರು :

ಮನುಷ್ಯರ ಕಾನೂನು ದೇವರ ಕಟ್ಟಳೆಗಳಿಗೆ ವಿರೋಧವಾದ ಸಂದರ್ಭದಲ್ಲಿ ಪರಿಣಾಮಗಳು ಏನೇ ಆಗಲಿ ನಾವು ದೇವರಿಗೆ ವಿಧೇಯರಾಗಬೇಕು. ಒಬ್ಬ ಗುಲಾಮನು ಸಿಕ್ಕಿದರೆ ಅವನನ್ನು ಹಿಡಿದು ಅವನ ಯಜಮಾನನಿಗೆ ಒಪ್ಪಿಸಬೇಕು ಎಂದು ಕಾನೂನು ಹೇಳುತ್ತದೆ. ಆದರೆ ನಾವು ಹಾಗೆ ಮಾಡದೆ ಕಾನೂನನ್ನು ಮೀರಿದುದಕ್ಕೆ ಅದರ ಪರಿಣಾಮಗಳನ್ನು ಎದುರಿಸುತ್ತೇವೆ. ಗುಲಾಮನು ಮನುಷ್ಯರ ಆಸ್ತಿಯಲ್ಲ, ದೇವರು ಆತನ ನಿಜವಾದ ಯಜಮಾನ. ದೇವರ ಕೈಕೆಲಸವಾಗಿರುವುದನ್ನು ಕಿತ್ತುಕೊಳ್ಳದ ಹಕ್ಕು ಮನುಷ್ಯನಿಗಿಲ್ಲ.

ಅಧಿಕಾರಿಗಳಿಗೆ ವಿಧೇಯರಾಗುವ ಮತ್ತು ಅಧಿಕಾರಕ್ಕೆ ಬಲಿಪಶುವಾದವರ ಪರವಾಗಿ ನಿಲ್ಲುವ ಮಧ್ಯೆ ಗೆರೆ ಎಲ್ಲಿದೆ?

**ಸೋಮವಾರ** **ಸೆಪ್ಟೆಂಬರ್ 16**

# ಅನುಕಂಪಕ್ಕೆ ಆಯಾಸ

ನಾವು ನಮ್ಮ ಒಳ್ಳೆಯ ಉದ್ದೇಶಗಳನ್ನು ಬಿಟ್ಟು ಬಿಡುವ ಸಾಧ್ಯತೆ ಬಂದಾಗ ಅದನ್ನು ಪ್ರತಿರೋಧಿಸಬೇಕು. ಲೋಕದಿಂದ ಬರುವ ಎಲ್ಲಾ ಸಮಸ್ಯೆಗಳು ಈ ಪ್ರತಿರೋಧವನ್ನು ನಾಶಪಡಿಸುತ್ತವೆ. ನಮ್ಮಲ್ಲಿ ಅನೇಕರು ಸಮಸ್ಯೆಗಳಲ್ಲಿ ಸಿಕ್ಕಿ ಹಾಕಿಕೊಂಡವರ ಜೀವಿತದಲ್ಲಿ ವ್ಯತ್ಯಾಸವನ್ನು ತರಲು ಹೆಚ್ಚಿನ ಶ್ರಮ ವಹಿಸುತ್ತಾರೆ. ನಾವು ಕಷ್ಟದಲ್ಲಿರುವವರಿಗೆ ಸಕಾರಾತ್ಮಕವಾಗಿ ಸ್ಪಂದಿಸುವಂತೆ ಮಾಡುವ ಮನೋಧೋರಣೆಗಳು ಮತ್ತು ಕ್ರಿಯೆಗಳು ಅನೇಕ ಇವೆ.

**ಕನಿಕರ :** ನೊಂದವರ ನೋವುಗಳನ್ನು ಗುರುತಿಸಿ ಅದನ್ನು ಎತ್ತಿಹಿಡಿಯುವ ಕೆಲಸವು ಪ್ರಥಮ ಹೆಜ್ಜೆಯಾಗಿದೆ. ಕಷ್ಟದಲ್ಲಿರುವವರಿಗೆ ನಾವು ಸಂವೇದನೆ ಉಳ್ಳವರಾಗಿರಬೇಕು. ಇಂದು ಜನರು "ಅನುಕಂಪದ ಆಯಾಸ"ದ ಬಗ್ಗೆ ಮಾತಾಡುತ್ತಾರೆ. ಜನರ ದುಃಖ ದುರಂತಗಳಿಗೆ ಒಪ್ಪಿಕೊಳ್ಳುವವರಿಗೆ ಭಾವುಕಶಕ್ತಿ ಮತ್ತು ಹಣಕಾಸಿನ ಅಗತ್ಯವಿರುತ್ತದೆ. ಹಾಗೆ ಹೆಚ್ಚಾಗಿ ಒಪ್ಪಿಕೊಂಡು ಆಯಾಸಗೊಳ್ಳುವುದನ್ನು "ಅನುಕಂಪದ ಆಯಾಸ" ಎಂದು ಕರೆಯುತ್ತಾರೆ. ಯೇಸುಕ್ರಿಸ್ತನಿಗೆ ತನ್ನ ಸುತ್ತವಿದ್ದ ಕೆಡುಕು ಮತ್ತು ನೋವಿನ ಸೂಕ್ಷ್ಮ ಅರಿವು ಇತ್ತು. ಆದಾಗ್ಯೂ ಆತನು ಅನುಕಂಪ ಉಳ್ಳವನಾಗಿದ್ದನು. ನಾವು ಕೂಡ ಹಾಗೆಯೇ ಇರಬೇಕು.

**ಶಿಕ್ಷಣ :** ಅನ್ಯಾಯದ ಮತ್ತು ಬಡತನದ ಸನ್ನಿವೇಶಗಳು ಬಹಳ ಸಂಕೀರ್ಣ (ಜಟಿಲ)ವಾಗಿರುವುದರಿಂದ ಈ ಸನ್ನಿವೇಶಗಳ ಬಗ್ಗೆ ಆಲಿಸುವುದು ಮತ್ತು ತಿಳಿಯುವುದು ಬಹಳ ಮುಖ್ಯವಾಗಿದೆ.

ಒಳ್ಳೆಯ ಉದ್ದೇಶವುಳ್ಳ ಜನರು ಇತರರಿಗೆ ಸಹಾಯ ಮಾಡಲು ಹೋಗಿ ತಾವೇ ಕಷ್ಟಕ್ಕೆ ಸಿಲುಕಿದ ಅನೇಕ ಉದಾಹರಣೆಗಳಿವೆ. ಇದು ನಮ್ಮ ನಿಷ್ಕ್ರಿಯಗೆ ಕಾರಣವಾಗದೆ ನಮ್ಮನ್ನು ಮಾಹಿತಿಪೂರ್ಣ ಮತ್ತು ಚಿಂತನೆಭರಿತ ವಿಧಾನಗಳಿಗೆ ಒಳಗಾಗಿಸಬೇಕು.

**ಪ್ರಾರ್ಥನೆ :** ಒಂದು ಸಮಸ್ಯೆಯನ್ನು ನೋಡಿದಾಗ ನಮ್ಮ ಮೊದಲ ಆಲೋಚನೆ ಏನೆಂದರೆ ಅದರಿಂದ ಬಿಡಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು. ಆದರೆ ನಾವು ಅದಕ್ಕಾಗಿ ಪ್ರಾರ್ಥನೆ ಮಾಡಬೇಕೆಂದು ಸತ್ಯವೇದವು ತಿಳಿಸುತ್ತದೆ.

ನಾವು ಕಷ್ಟನಷ್ಟದಲ್ಲಿರುವವರಿಗೆ, ಶೋಷಿತರಿಗೆ ಮಾತ್ರವಲ್ಲದೆ ಅವರ ಮೇಲೆ ಅಧಿಕಾರ ಹೊಂದಿದವರಿಗೋಸ್ಕರವು ಸಹ ಪ್ರಾರ್ಥನೆ ಮಾಡುವಾಗ ಅವರ ಜೀವನಗಳಲ್ಲಿ ಒಂದು ವ್ಯತ್ಯಾಸ ತರುತ್ತೇವೆ (1 ತಿಮೊಥಿ 2:11–2). ಇನ್ನೂ ಹೆಚ್ಚಿನ ಸಹಾಯ ನೀಡುವುದಕ್ಕೆ ದೇವರಿಂದ ಹೆಚ್ಚಿನ ಜ್ಞಾನ ಹೊಂದಿಕೊಳ್ಳಬೇಕು (ಜ್ಞಾನೋಕ್ತಿ 2:7,8).

**ನಿರೀಕ್ಷೆಗಳು :** ಸಾಮಾಜಿಕ, ರಾಜಕೀಯ ಮತ್ತು ವೈಯಕ್ತಿಕ ಸಂಕೀರ್ಣತೆಯುಳ್ಳ ಸನ್ನಿವೇಶಗಳಲ್ಲಿ ಬಾಧೆಪಡುತ್ತಿರುವವರಿಗೆ ಶಮನಕಾರಿಯಾದ ಮುಖ್ಯವಾದ ಅಂಶ ನಿರೀಕ್ಷೆಗಳು. ನಮ್ಮ ಭರವಸೆಯು ಜನರಿಗೆ ಆಯ್ಕೆಗಳು ಮತ್ತು ಅವಕಾಶಗಳನ್ನು ಕೊಡಬೇಕು. ಕೆಲವು ವೇಳೆ ಜನರು ಇಂಥಾ ಅವಕಾಶಗಳಲ್ಲಿ ಏನು ಮಾಡುತ್ತಾರೋ ಅದು ನಮ್ಮನ್ನು ಹತಾಶರನ್ನಾಗಿ ಮಾಡಬಹುದು. ಆದರೆ ಅವರ ಆಯ್ಕೆಗಳನ್ನು ನಾವು ಮಾನ್ಯ ಮಾಡಬೇಕು (ಗೌರವಿಸಬೇಕು). ಯಾವುದೇ ರೀತಿಯಲ್ಲಾದರೂ ನಾವು ಕಷ್ಟದಲ್ಲಿರುವವರ ಪರವಾಗಿ ಕೆಲಸ ಮಾಡಬಹುದು. ಆವಾಗ ನಮಗೆ "ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ" (ಮತ್ತಾಯ 7:12) ಎಂಬುದು ಮಾರ್ಗದರ್ಶಕವಾಗಿರಬೇಕು.

ಓದಿರಿ : ಯಾಕೋಬ 1:5–8, ಪ್ರಾರ್ಥನೆಯು ಕ್ರೈಸ್ತರ ಜೀವಿತದಲ್ಲಿ ಯಾವ ಪಾತ್ರವನ್ನು ವಹಿಸಬೇಕು? ಯಾಕೋಬ 2:15,16. ನಾವು ಬೇರೆಯವರಿಗಾಗಿ ಪ್ರಾರ್ಥಿಸುವಾಗ ಅದಕ್ಕೆ ಉತ್ತರ ಸಿಗುವಂತೆ ನಾವೇನು ಮಾಡಬೇಕೆಂದು ಸೂಚಿಸುತ್ತದೆ?

**ಮಂಗಳವಾರ** **ಸೆಪ್ಟೆಂಬರ್ 17**

## ಉದಾರತೆ (ಧಾರಾಳತನ)

ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು (2 ಕೊರಿಂಥ 9:7). ಉದಾರವಾಗಿ ಕೊಡುವುದು ಕ್ರೈಸ್ತೀಯ ಜೀವನದಲ್ಲಿ ಒಂದು ಮುಖ್ಯವಾದ ಅಂಶ. ನಮ್ಮ ಕೊಡುವಿಕೆ ಮತ್ತು ಹಣಕಾಸಿನ ಆದ್ಯತೆಗಳಿಗೆ ಸವಾಲೆಸೆಯುವಂತೆ ಸತ್ಯವೇದಕ್ಕೆ ನಾವು ಅವಕಾಶವನ್ನೀಯಬೇಕು. ಕಾರಣ

ಏಷ್ಟೇ ಯೋಗ್ಯರಾಗಿದ್ದರೂ ಅದಕ್ಕಾಗಿ ಹಣವನ್ನೆಸೆವ ಉದಾರತೆ ಎಂಬುದು ಒಂದು ಕಾರಣಕ್ಕೆ ಹಣವನ್ನು ಎಸೆಯುವುದಕ್ಕಿಂತ ಹೆಚ್ಚಿನದು. ಆ ಕಾರಣ ಎಷ್ಟೇ ಯೋಗ್ಯವಾಗಿದ್ದರೂ ಸರಿ.

ಜೀವನದ ದೊಡ್ಡ ಧೋರಣೆಗಳಲ್ಲಿ ಉದಾರತೆ ಎಂಬುದು ಒಂದು. ದೇವರಿಗೆ ಭಯಪಡುವವರ ಮುಖ್ಯವಾದ ಗುಣಲಕ್ಷಣವಾಗಿದೆ. ಇದಕ್ಕೆ ಕೀರ್ತನೆ 112 ಬಹಳ ಸಲ ಗಮನ ಹರಿಸುತ್ತದೆ. "ದಯಾಳುವಾಗಿ ಧನಸಹಾಯ ಮಾಡುವವನೂ ತನ್ನ ಕಾರ್ಯಗಳನ್ನು ನೀತಿಯಿಂದ ನಡೆಸುವವನು ಧನ್ಯನು (ಕೀರ್ತನೆ 112:5).

ಕೆಳಗೆ ಕೊಟ್ಟಿರುವ ಪಠ್ಯಗಳು "ಉದಾರತೆ"ಯ ಬಗ್ಗೆ ಏನನ್ನು ಬೋಧಿಸುತ್ತವೆ? ಯಾ.ಕಾಂಡ 23:35–37, ಕೀರ್ತನೆ 119:36 ಮತ್ತು 2 ಕೊರಿಂಥ 8:12–15 ಮತ್ತು 1 ಯೋಹಾನ 3:16 ಮತ್ತು 1 ತಿಮೊಥಿ 6:17–19.

ಪೌಲನು ಹೊಸ ಒಡಂಬಡಿಕೆಯಲ್ಲಿ ಬರೆದ ಪತ್ರಗಳಲ್ಲಿ ದೇವರ ಉದಾರತೆಯನ್ನು ಉಲ್ಲೇಖಿಸಿದ್ದಾನೆ. ದೇವರು ತನ್ನ ಒಬ್ಬನೇ ಮಗನನ್ನು ನಮಗಾಗಿ ಜೀವ ತರುವುದಕ್ಕೆ ಕೊಟ್ಟನು ಎಂಬುದೇ ಕ್ರೈಸ್ತರ ನಿರೀಕ್ಷೆಗೆ ಮೂಲಾಧಾರವಾದುದು. ಇದಕ್ಕೆ ಪ್ರತಿಯಾಗಿ ಯೇಸುಕ್ರಿಸ್ತನ ಮರಣವು ಕ್ರೈಸ್ತರು ಇತರರಿಗೆ ಉದಾರತೆಯಿಂದ ಜೀವಿಸುವಂತೆ ಉತ್ತೇಜನ ನೀಡುತ್ತದೆ. "ಕ್ರಿಸ್ತನಲ್ಲಿ ನಮಗೆ ದೊರಕಿರುವ ಎಲ್ಲಾ ಸುವರಗಳನ್ನು ಕುರಿತು ನೀನು ತಿಳುವಳಿಕೆಯನ್ನು ಹೊಂದುತ್ತಿರುವಲ್ಲಿ ಕ್ರಿಸ್ತನಂಬಿಕೆಯಲ್ಲಿರುವ ನಿನ್ನ ಅನ್ಯೋನ್ಯತೆಯು ಕ್ರಿಸ್ತನಿಗೆ ಹೆಚ್ಚಾದ ಮಹಿಮೆಯನ್ನು ಉಂಟು ಮಾಡಬೇಕೆಂದು ಪ್ರಾರ್ಥಿಸುತ್ತೇನೆ" ಫಿಲೆಮೋನ 1:6.

ಉದಾರತೆಯು ದೊಡ್ಡದಾದ, ದಿಟ್ಟವಾದ ಮತ್ತು ಅಂಗೀಕರಿಸುವ ಜೀವನದ ಒಂದು ಮನೋಧರ್ಮವಾಗಿದೆ. ಸ್ವಾರ್ಥವು ವೈಯಕ್ತಿಕ ಜೀವನದಲ್ಲಿ, ಸಮಾಜದಲ್ಲಿ, ಸಂಸ್ಕೃತಿಯಲ್ಲಿ ನಮ್ಮನ್ನು ಮಾತ್ರ ನಾವು ನೋಡಿಕೊಳ್ಳುವಂತೆ ಪ್ರೇರಿಸುತ್ತದೆ. ನಾವು ನಮಗಾಗಿ ಎಷ್ಟು ಇಟ್ಟುಕೊಳ್ಳಬಲ್ಲೆವು ಅಷ್ಟನ್ನೂ ಆಸೆ ಪಡುತ್ತೇವೆ.

ನಮ್ಮ ನಂಬಿಕೆಯು ನಮ್ಮ ಪಾಲಿಗೆ ಸತ್ತು ಇತರರ ಪಾಲಿಗೆ ಜೀವಿಸುವಂತೆ ಮಾಡುತ್ತದೆ. ದೇವರು ಜನರನ್ನು ಹೇಗೆ ನೋಡುತ್ತಾನೆಯೋ ಹಾಗೆಯೇ ನಾವು

ಸಹ ಕಲ್ಪನೆ ಮಾಡಲು ನಮ್ಮ ನಂಬಿಕೆಯು ಸಹಾಯ ಮಾಡುತ್ತದೆ. ಅದು ಯಾವ ಮಟ್ಟಕ್ಕಾದರೂ ಕೊರತೆಯಲ್ಲಿರುವವರಿಗೆ ಸಹಾಯ ಮಾಡುವಂತೆ ನಮ್ಮನ್ನು ಬಲವಂತ ಮಾಡುತ್ತದೆ.

ಜೀವನದ ಗುಣಧರ್ಮವಾಗಿ ಉದಾರತೆಯು ನಿಧಿಸಂಗ್ರಹವವರೆಗೆ ಮತ್ತು ದಾನ ಬಯಸುವವರ ಮೆಚ್ಚುಗೆಯನ್ನು ಪಡೆಯುತ್ತದೆ. ಅಂತಹ ಉದಾರತೆಯು ಯಾವಾಗಲೂ ಅಳೆಯಬಹುದಾಗಿರುತ್ತದೆ ಮತ್ತು ವ್ಯವಹಾರ್ಯವಾಗಿರುತ್ತದೆ. ಆದರೆ ದೊಡ್ಡದಾನವು ಉದಾರತೆಯ ಜೀವನವನ್ನು ಸೂಚಿಸುವುದಿಲ್ಲ (ಮಾರ್ಕ 12:41–44ನ್ನು ನೋಡಿರಿ). ಒಂದು ಧಾರಾಳತೆಯ ಜೀವನ ಯಾವುದೇ ದಾನಕ್ಕಿಂತ ದೊಡ್ಡದೂ ಮೌಲ್ಯಯುಳ್ಳದ್ದೂ ಆಗಿರುತ್ತದೆ. ನಾವು ಎಲ್ಲದರಲ್ಲೂ ಧಾರಾಳತನವನ್ನು ಬೆಳೆಸಿಕೊಳ್ಳಬೇಕು ಮತ್ತು ಮೆಚ್ಚಬೇಕು.

ಬಹುತೇಕ ಜನರಿಗೆ ಧಾರಾಳತನ (ಉದಾರತೆ) ಸ್ವಾಭಾವಿಕವಾಗಿ ಬರುವುದಿಲ್ಲ. ಇದನ್ನು ನಿಮ್ಮ ಜೀವಿತದಲ್ಲಿ ನಾವು ಕ್ರಿಯಾಶೀಲರಾಗಿ, ದೃಢಮನಸ್ಸಿನಿಂದ ವ್ಯಕ್ತಪಡಿಸುವುದು ಮನೋಹರವಾಗಿರುತ್ತದೆ.

ಧಾರಾಳವಾಗಿ ಹಣಕೊಡುವುದರ ಜೊತೆಗೆ ಬೇರೆ ಯಾವ ರೀತಿಯಾಗಿ ನಮ್ಮ ಧಾರಾಳತನವನ್ನು ತೋರ್ಪಡಿಸಬಹುದು?

**ಬುಧವಾರ** **ಸೆಪ್ಟೆಂಬರ್ 18**

## ಸಮಾಧಾನ ಪಡಿಸುವಿಕೆ

ಮತ್ತಾಯ 5:9ನ್ನು ಓದಿರಿ. ನಾವು ಜೀವಿಸುವ ಇಂತಹ ಲೋಕದಲ್ಲಿ ಯೇಸು ಹೇಳುವುದನ್ನು ಹೇಗೆ ಮಾಡುತ್ತೇವೆ? ಅಂತಿಮವಾಗಿ ಇದರಲ್ಲಿ ಎಷ್ಟು ಯಶಸ್ಸನ್ನು ಗಳಿಸುತ್ತೇವೆ? ಕಷ್ಟಗಳಿಗೆ ರೋಷಭರಿತ ಜಗಳಗಳು ಮುಖ್ಯವಾದ ಕಾರಣಗಳಾಗಿವೆ. ಯುದ್ಧಗಳ ದೆಸೆಯಿಂದ ಜನರು ಬಲಿಪಶುಗಳಾಗುತ್ತಾರೆ ಮತ್ತು ಜೀವನಗಳು ಛಿದ್ರವಾಗುತ್ತವೆ. ಸೈನ್ಯಕ್ಕೆ ಕೊಡುವ ಆಸಕ್ತಿ ಮತ್ತು ಸಂಪನ್ಮೂಲಗಳನ್ನು ಜನರ ಅವಶ್ಯಕತೆಗಳನ್ನು ಪೂರೈಸುವುದಕ್ಕೂ ಕಷ್ಟಸಂಕಟಗಳನ್ನು ಪರಿಹರಿಸುವುದಕ್ಕೂ ತಿರುಗಿಸಿದರೆ ಬಹಳ ಲೇಸಾಗುತ್ತದೆ. ಕಷ್ಟನಷ್ಟಗಳು ಯುದ್ಧದಲ್ಲಿ ಗೆದ್ದವರಿಗೂ ಉಂಟಾಗುತ್ತದೆ. ಸಣ್ಣ ಸಣ್ಣ ಜಗಳಗಳು ಕುಟುಂಬದಲ್ಲಿ ಮತ್ತು ಸಮುದಾಯದಲ್ಲಿ

ಅಳಿಸಲಾಗದ ಕಲೆಗಳನ್ನು ಉಂಟುಮಾಡುತ್ತವೆ. ಹಾಗಾಗಿ ನ್ಯಾಯಾಪೇಕ್ಷೆಯು ಕಡ್ಡಾಯವಾಗಿ ಶಾಂತಿಯನ್ನು ಕಡೆಗಣಿಸುವುದಿಲ್ಲ.

ಕ್ರಿಸ್ತನ ಸುವಾರ್ತೆಯು ಹೃದಯದಲ್ಲಿ ದೇವರ ದಯೆಯೂ ಸಮಾಧಾನ ಪಡಿಸುವ ಮಹಾತ್ಕಾರ್ಯವು ಪಾಪಿ ಮನುಷ್ಯನನ್ನು ಸೃಷ್ಟಿಕರ್ತನ ಜೊತೆ ಮರುಸಂಧಾನ ಪಡಿಸುತ್ತದೆ (2 ಕೊರಿಂಥ 5:18–21ನ್ನು ನೋಡಿರಿ). ನಮಗೆ ಸಿಕ್ಕಿದ ಸಂಧಾನವು ನಾವು ಇತರರನ್ನು ಸಂಧಾನ ಪಡಿಸುವ ರಾಯಭಾರಿಗಳ ನಮೂನೆಯಾಗಿದೆ. ಯೆಶಾಯ 52:7 ಈ ವಚನವನ್ನು ಸಹ ಹೇಗೆ ಜೀವಿಸಬಹುದು?

ಹಿಂಸೆ ತುಂಬಿದ ಲೋಕದಲ್ಲಿ ಸಮಾಧಾನದ ಸುವಾರ್ತೆಯು ಸಮಾಧಾನ ಪಡಿಸುವ ಪ್ರೇರಕ, ನಮೂನೆ ಮತ್ತು ಸಂಪನ್ಮೂಲವಾಗಿದೆ. ದೇವರೊಂದಿಗೆ ಸಾಮರಸ್ಯದಲ್ಲಿರುವ ಹೃದಯವಂತನು ಪರಲೋಕದ ಸಮಾಧಾನದಲ್ಲಿ ಪಾಲುಗಾರನಾಗಿರುತ್ತಾನೆ ಮತ್ತು ಅದರ ಪ್ರಭಾವವನ್ನು ತನ್ನ ಸುತ್ತ ಹರಡುವವನಾಗಿರುತ್ತಾನೆ.

ಸಮಾಧಾನದ ಆತ್ಮ ಲೋಕದ ಕಲಹದಿಂದ, ಆಯಾಸಗೊಂಡ ಮತ್ತು ಜರ್ಜರಿತವಾದ ಹೃದಯಕ್ಕೆ ಇಬ್ಬನಿಯಂತೆ ತಣ್ಣಗಿರುತ್ತದೆ. ಎಲೆನ್ ಜಿ ವೈಟಮ್ಮನವರ Thoughts from the Mount of Blessing P. 28.

ಪರ್ವತ ಪ್ರಸಂಗದಲ್ಲಿ ಯೇಸುವು ಸಮಾಧಾನ ಪಡಿಸುವವರು ಧನ್ಯರು ಅವರು ದೇವರ ಮಕ್ಕಳು ಎನಿಸಿಕೊಳ್ಳುವರು (ಮತ್ತಾಯ 5:9). ಇದನ್ನು ಮುಂದುವರೆಸಿ ನರಹತ್ಯದ ವಿರುದ್ಧವಿರುವ ಆಜ್ಞೆಯನ್ನು ದೃಢೀಕರಿಸುವುದು ಮಾತ್ರವಲ್ಲದೆ ಕೋಪ ಮಾಡಬಾರದು ಮತ್ತು ಮುಯ್ಯಿಗೆ ಮುಯ್ಯಿ ತೀರಿಸಬಾರದು ಎಂದು ಹೇಳಿದನು (ಮತ್ತಾಯ 5:21–26ನ್ನು ನೋಡಿರಿ). ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕು. ನಮ್ಮನ್ನು ಹಿಂಸೆ ಪಡಿಸುಡುವವರಿಗಾಗಿ ಪ್ರಾರ್ಥಿಸಬೇಕು (ಮತ್ತಾಯ 5:43–48). ಇದರ ಅರ್ಥ ನಾವು ಅವರ ಒಳಿತನ್ನು ಬಯಸುವವರಾಗಿ ಕ್ರಿಯಾಶೀಲರಾಗಬೇಕು. ತಮ್ಮ ಜೀವನವನ್ನು ಲೋಕದಲ್ಲಿ ವಿರಸ ತುಂಬಿದ ಸ್ಥಳಗಳಿಗೆ ಹೋಗಿ ಸಮಾಧಾನ ಪಡಿಸುವ ಕೆಲಸಕ್ಕೆ ಮುಡಿಪಾಗಿಟ್ಟವರ ಅನೇಕ ಸ್ಫೂರ್ತಿದಾಯಕ ಕಥೆಗಳಿವೆ. ಸಂಧಾನಪಡಿಸುವವರಾಗಿ

ಮತ್ತು ಗುಣಪಡಿಸುವವರಾಗಿ ವಿರಸಗಳು ತಂದ ಬಹಳ ಅನ್ಯಾಯ ಮತ್ತು ಭಾವನೆಗಳನ್ನು ಶಮನಪಡಿಸುವ ಕಿರುನೋಟವನ್ನು ಕಾಣುತ್ತೇವೆ.

ನಿಮ್ಮ ಸ್ಥಳೀಯ ಸಭೆ ಸ್ಥಳೀಯ ಮಟ್ಟದಲ್ಲಿ ಶಾಂತಿದೂತನ ಪಾತ್ರವಹಿಸುವ ವಿಧಾನಗಳಾವುವು?

**ಗುರುವಾರ** **ಸೆಪ್ಟೆಂಬರ್ 19**

## ದನಿ ಇಲ್ಲದವರಿಗೆ ದನಿಯಾಗುವುದು

ಪ್ರಸಂಗಿಯು ಸುಮ್ಮನಿರುವ ಸಮಯ ಮಾತಾಡುವ ಸಮಯವೆಂದು ಬರೆಯುತ್ತಾನೆ (ಪ್ರಸಂಗಿ 3:1). ಆತನು ಸರಿಯಾಗಿಯೇ ಹೇಳಿದ್ದಾನೆ. ನಮ್ಮಲ್ಲಿ ಯಾರಿಗಾದರೂ ಅವುಗಳಿಗೆ ಸಮತೋಲನ ಕಂಡುಕೊಳ್ಳುವುದು ಸುಲಭವಾದುದಲ್ಲ. ನಾವು ಕುಗ್ಗಿಹೋದವರ ಪರವಾಗಿ ಮಾತಾಡಬೇಕಾದಾಗ ನಮ್ಮ ದನಿಯಿಲ್ಲದವರಿಗೆ ದನಿಯಾಗಬೇಕಾದಾಗ ಮತ್ತು ಒಳ್ಳೆಯತನದಿಂದ ಕೆಟ್ಟತನವನ್ನು ಸೋಲಿಸಬೇಕಾದಾಗ ಸಭೆಯಾಗಿ ನಾವು ಮಾತಾಡುವ ಬದಲು ಸುಮ್ಮನೆ ಇದ್ದುಬಿಡುವುದು ತಪ್ಪಾಗುತ್ತದೆಯಲ್ಲವೆ?

ಕ್ರೈಸ್ತರು ಅನೇಕ ಸಲ ಯೇಸುವಿನ ಕೈಕಾಲುಗಳಿದ್ದಂತೆಯೆಂದು ಮಾತಾಡುತ್ತಾರೆ. ಯಾಕೆಂದರೆ ಅವರು ಯೇಸು ನಮಗೆ ಮಾಡಿದಂತೆ ನಾವು ಇತರರಿಗೆ ಸೇವೆ ಮಾಡಬೇಕಾಗುತ್ತದೆ. ಆದರೆ ಸತ್ಯವೇದದಲ್ಲಿ ಚಿತ್ರಿತವಾಗಿರುವಂತೆ ಪ್ರವಾದಿಯ ಪಾತ್ರವು ದೇವರ ಸ್ವರದಂತೆ ಕೆಲಸ ಮಾಡುವುದಕ್ಕೆ ಕರೆಯಲ್ಪಟ್ಟಿದೆ. ದೇವರ ಪರವಾಗಿ ಮಾತಾಡಬೇಕು ಮತ್ತು ದೇವರು ರಕ್ಷಿಸುವವರ ಪರವಾಗಿಯೂ ಮಾತಾಡುವವರಾಗಿರಬೇಕು (ಕೀರ್ತನೆಗಳು 146:6–10).

ಯೆಶಾಯ 58:1–10ನ್ನು ಓದಿರಿ. ಒಂದು ಗೊತ್ತಾದ ಸ್ಥಳದಲ್ಲಿ ಗೊತ್ತಾದ ಸಮಯಕ್ಕೆ ಗೊತ್ತಾದ ಸಂದರ್ಭಕ್ಕೆ ಕೊಟ್ಟಂತಹ ಈ ಸಂದೇಶವು ಇಂದಿನ ಗೊತ್ತಾದ ಸಮಯ, ಸ್ಥಳ, ಸಂದರ್ಭಕ್ಕೆ ಏನೆಂದು ಹೇಳುತ್ತದೆ? ಯೆಶಾಯನು ಬರೆದ ಸಮಯಕ್ಕೂ ಇಂದಿನ ಸಮಯಕ್ಕೂ ನಡುವೆ ಎಷ್ಟು ಬದಲಾವಣೆಯಾಗಿದೆ?

ನ್ಯಾಯದ ಪರವಾಗಿ ಪ್ರವಾದಿಗಳಿಗೆ ಬಂದ ಕರೆಯು ಜನಪ್ರಿಯ ಮಾರ್ಗವಾಗಿರಲಿಲ್ಲ, ಆದರೆ ದೇವರ ನ್ಯಾಯಪರತೆಯನ್ನು ಅರಿತವರಾಗಿ ದೇವರ

ಆದೇಶದಿಂದ ಪ್ರೇರಿಸಲ್ಪಟ್ಟವರಾಗಿ ಬಡವರ ಮತ್ತು ತುಳಿತಕ್ಕೊಳಗಾದವರ ಪರಿಸ್ಥಿತಿಗೆ ಅನುಕಂಪ ಉಳ್ಳವರಾಗಿ, ಸಮಾಜಕ್ಕೆ ಒಳಿತನ್ನು ಬಯಸುವವರಾಗಿ ಈ ಪ್ರವಾದಿಗಳು ತಮಗಷ್ಟೇ ವಿರೋಧ, ಅನಾನುಕೂಲ ಮತ್ತು ಅಪಾಯವಿದ್ದರೂ ತಮ್ಮ ಸ್ಥಳದಲ್ಲಿ, ತಮ್ಮ ಸಮಯದಲ್ಲಿ ದನಿಯಿಲ್ಲದವರಿಗೆ ದನಿಯಾಗುವುದಕ್ಕೆ ಧೈರ್ಯ ಮಾಡಿದರು. ನಮ್ಮ ಸುವಾರ್ತೆಯ ಜ್ಞಾನವನ್ನಾಧರಿಸಿ ಮತ್ತು ಲೋಕಕ್ಕೆ ಯೇಸುವನ್ನು ಪ್ರತಿಬಿಂಬಿಸುವವರಾಗಿ ಸೆವೆಂತ್ ಡೇ ಅಡ್ವೆಂಟಿಸ್ಟರು ಈ ಲೋಕದ ದುಷ್ಟತನದ ವಿರೋಧವಾಗಿ ಹೋರಾಡುವಾಗ ಅನೇಕ ಒಳ್ಳೆಯದನ್ನು ಕೊಡುವರಾಗಿದ್ದಾರೆ.

ಸೆವೆಂತ್ ಡೇ ಅಡ್ವೆಂಟಿಸ್ಟರು ಬಡತನ ಮತ್ತು ಅದರ ಸೇವಕನಂತಿರುವ ಅನ್ಯಾಯವನ್ನು ಕಡಿಮೆ ಮಾಡುವ ಕೆಲಸಗಳನ್ನು ಕ್ರೈಸ್ತೀಯ ಸಾಮಾಜಿಕ ಜವಾಬ್ದಾರಿಯೆಂದು ನಂಬುತ್ತಾರೆ. ಸತ್ಯವೇದವು ದೇವರು ಬಡವರ ಮೇಲೆ ತೋರುವ ವಿಶೇಷವಾದ ಆಸಕ್ತಿಯ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ ಮತ್ತು ಅವನ ಅನುಯಾಯಿಗಳು ತಮ್ಮ ಬಗ್ಗೆ ಚಿಂತಿಸಲಾರದವರ ಬಗ್ಗೆ ಹೇಗೆ ಸ್ಪಂದಿಸಬೇಕು ಎಂಬುದನ್ನು ಅವರಿಂದ ನಿರೀಕ್ಷಿಸುತ್ತಾನೆ. ಮಾನವರೆಲ್ಲರೂ ದೇವರ ಸ್ವರೂಪವನ್ನು ಹೊಂದಿದ್ದಾರೆ. ದೇವರ ಆಶೀರ್ವಾದಗಳನ್ನು ಪಡೆದುಕೊಂಡವರಾಗಿದ್ದಾರೆ (ಲೂಕ 6:20). ಬಡವರೊಂದಿಗೆ ಕೆಲಸ ಮಾಡುವಾಗ ನಾವು ಯೇಸುವನ್ನು ಮತ್ತು ಆತನ ಬೋಧನೆಗಳನ್ನು ಪಾಲಿಸುವವರಾಗಿರುತ್ತೇವೆ (ಮತ್ತಾಯ 25:35,36). ಆತ್ಮೀಕ ಸಮುದಾಯವಾಗಿ ಸೆವೆಂತ್ ಡೇ ಅಡ್ವೆಂಟಿಸ್ಟರು ಬಡವರಿಗೆ ನ್ಯಾಯ ದೊರಕಿಸುತ್ತಾರೆ ಮತ್ತು ಯಾರು ತಮ್ಮ ಪರವಾಗಿ ದನಿ ಎತ್ತಲಾರರೋ ಅವರ ಪರವಾಗಿ ಮಾತಾಡುವವರಾಗಿದ್ದಾರೆ (ಜ್ಞಾನೋಕ್ತಿಗಳು 31:8), ಬಡವರ ಹಕ್ಕಗಳನ್ನು ಕಿತ್ತುಕೊಳ್ಳುವವರ ವಿರುದ್ಧವಾಗಿರುತ್ತಾರೆ (ಯೆಶಾಯ 10:2). ಬಡವರಿಗೆ ನ್ಯಾಯವನ್ನು ಒದಗಿಸುವ ದೇವರೊಂದಿಗೆ ಭಾಗವಹಿಸುತ್ತಾರೆ (ಕೀರ್ತನೆಗಳು 140:12).

**ಶುಕ್ರವಾರ** **ಸೆಪ್ಟೆಂಬರ್ 20**

**ಹೆಚ್ಚಿನ ಚಿಂತನೆ :** ಓದಿರಿ : Ministry of Healing ಪುಸ್ತಕದಲ್ಲಿ A Higher Experience ಪುಟಗಳು 503–516. Testimonies for the

church ಪುಸ್ತಕದಲ್ಲಿ Duty to the unfortunate ಮತ್ತು Man's duty to his fellow men ಪುಟ 511–526.

ಪರಲೋಕ, ಭೂಲೋಕಗಳನ್ನು ಹುಡುಕಿದಾಗ ಬೇರೆ ಯಾವ ಸತ್ಯವೂ ಹೆಚ್ಚು ಬಲಯುತವಾಗಿ ಅಂದರೆ ಬಡವರಿಗೆ ತೋರುವ ಕರುಣೆಯುಳ್ಳ ಕೆಲಸಗಳಿಗಿಂತ, ಹೆಚ್ಚಾಗಿ ತೋರಿಸಲ್ಪಟ್ಟಿಲ್ಲ. ಇದುವೇ ಯೇಸುವಿನಲ್ಲಿ ಸತ್ಯವು. ಯಾರು ಕ್ರಿಸ್ತನನ್ನು ನಂಬುತ್ತಾರೋ ಅವರು "ಸುವರ್ಣನಿಯಮ"ದ ತತ್ವಗಳನ್ನು ಪಾಲಿಸುತ್ತಾರೆ. ಅಪೋಸ್ತಲರ ಕಾಲದಲ್ಲಿ ಬಂದ ಅದೆ ಶಕ್ತಿಯು ಸುವಾರ್ತೆಯನ್ನು ಸೇವೆಯನ್ನು ಮುನ್ನಡೆಸುತ್ತದೆ. ಎಲೆನ್ ಜಿ ವೈಟಮ್ಮನವರ Thoughts from the Mount of Blessing ಪುಟ 137.

ಪರಸ್ಪರ ತೋರುವ ನಿಸ್ವಾರ್ಥ ಪ್ರೀತಿ ಮತ್ತು ದೇವರ ಮೇಲಿನ ಪರಮ ಪ್ರೀತಿ – ಇದು ತಾನೆ ಪರಲೋಕ ದೇವರು ಕೊಡಬಹುದಾದ ಶ್ರೇಷ್ಠ ವರ. ಈ ಪ್ರೀತಿಯು ಕೇವಲ ಆವೇಶವಲ್ಲ. ಆದರೆ ದೈವೀಕ ನಿಯಮ. ಒಂದು ಶಾಶ್ವತ ಶಕ್ತಿ. ಅಶುದ್ಧವಾದ ಹೃದಯದಿಂದ ಇದು ಬರಲಾರದು/ಉತ್ಪತ್ತಿಯಾಗುವುದಿಲ್ಲ. ಯಾವ ಹೃದಯದಲ್ಲಿ ಕ್ರಿಸ್ತನು ಆಳುತ್ತಾನೋ ಅಲ್ಲಿ ಮಾತ್ರ ಈ ಪ್ರೀತಿಯನ್ನು ಕಾಣಬಹುದು. ಈ ಪ್ರೀತಿಯು ಆತ್ಮದಲ್ಲಿ ಹುಟ್ಟುತ್ತದೆ, ಜೀವನವನ್ನು ಮಧುರಗೊಳಿಸುತ್ತದೆ ಮತ್ತು ಶುದ್ಧೀಕರಣೆಯ ಪ್ರಭಾವವನ್ನು ಎಲ್ಲೆಡೆ ಬೀರುತ್ತದೆ. ಎಲೆನ್ ಜಿ ವೈಟಮ್ಮನವರ The Acts of Apostles ಪುಟ 551.

## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ವಾರದ ಅಧ್ಯಯನದಲ್ಲಿ ನಾವು ನೋಡಿದಂತೆ ಕ್ರಿಸ್ತನ ನಮ್ಮಲ್ಲಿ ಕೆಲಸ ಮಾಡಿದಾಗ ಇತರರ ಪರವಾಗಿ ಕಾರ್ಯಮಾಡುವಂತೆ ಸುವಾರ್ತೆಯು ಪ್ರೇರಿಸುತ್ತದೆ. ದೇವರು ನಮಗೆ ಏನು ಮಾಡಿದ್ದಾನೆ? ತನ್ನ ಪ್ರೀತಿಯನ್ನು ಹೇಗೆ ತೋರಿದ್ದಾನೆ ಎಂಬ ಸುವಾರ್ತೆಯು ನಿಮ್ಮ ಅರಿವನ್ನು ಹೇಗೆ ವಿಶಾಲ ಪಡಿಸುತ್ತದೆ?

2. ದನಿಯಿಲ್ಲದವರಿಗೆ ದನಿ ಎತ್ತುವುದು, ಸಮಾಧಾನಪಡಿಸುವ ಕೆಲಸದಲ್ಲಿ ತೊಡಗಿಕೊಳ್ಳುವುದು ಮತ್ತು ನಮ್ಮನ್ನು ಸಾರ್ವಜನಿಕ ಮತ್ತು ರಾಜ್ಯಿಯ

ಕ್ಷೇತ್ರಕ್ಕೆ (ರಂಗಕ್ಕೆ) ಅದೇ ತರನಾದ ಚಟುವಟಿಕೆಗಳು. ಸೆವೆಂತ್ ಡೇ ಅಡ್ವೆಂಟಿಸ್ಟ್ ಸಭೆಯು ರಾಜ್ಯವನ್ನು ಸಭೆಯನ್ನು ಪ್ರತ್ಯೇಕ ಪದಿಸುವ ಪಟುವಿನಂತಿದೆ. ಅಸಮರ್ಪಕವಾಗಿ ರಾಜಕೀಯದಲ್ಲಿ ತೊಡಗಿಸಿ–ಕೊಳ್ಳುವುದಕ್ಕೂ ಮತ್ತು ಸಾರ್ವಜನಿಕವಾದ ರೀತಿಯಲ್ಲಿ ಸಮಾಧಾನ ಪಡಿಸಲು ಮಾತಾಡುವುದಕ್ಕೂ ಏನು ವ್ಯತ್ಯಾಸ?

3. ಈ ವಾರದ ಅಧ್ಯಯನದಲ್ಲಿ ಚರ್ಚೆ ಮಾಡಲ್ಪಟ್ಟಿರುವ ಯಾವ ಒಂದು ಹೆಜ್ಜೆ ಮತ್ತು ಕ್ರಮವನ್ನು ನಿಮ್ಮ ಮತ್ತು ನಿಮ್ಮ ಸಮುದಾಯದಲ್ಲಿ ತೆಗೆದುಕೊಳ್ಳ ಬಯಸುತ್ತೀರಿ? ಅದು ಜರುಗುವಂತೆ ಹೇಗೆ ಮಾಡಬಲ್ಲಿರಿ.

4. ಯಾವ ದುಷ್ಟತ್ವಕ್ಕೆ ಮತ್ತು ಶೋಷಣೆಗೆ ನಿಮ್ಮ ಸಮುದಾಯದಲ್ಲಿ ಅಥವಾ ವಿಶಾಲ ಪ್ರಪಂಚದಲ್ಲಿ ಪ್ರಾರ್ಥಿಸುವಿರಿ?